ಈ) ಬ್ಯಾಡಗಿ ತಾಲ್ಲೂಕಿನ ಸರಹದ್ದಿನ ಬಳಿ ಇರುವ ತುಂಗಾ ಮೇಲ್ದಂಡೆ ಯೋಜನೆಯ ಮುಖ್ಯ ಕಾಲುವೆ ಜೈ. 176.00 ಕಿ.ಮೀ.ನಲ್ಲಿ ಕಾಲುವೆ ತಳಮಟ್ಟವು 560.426 ಮೀ. ಇದ್ದು ಬ್ಯಾಡಗಿ ತಾಲ್ಲೂಕಿನ ಭೂ ಪ್ರದೇಶಗಳ ಸರಾಸರಿ ಲೆವೆಲ್‌ಗಳು 600 ಮೀ. ನಿಂದ 621 ಮೀ. ವರೆಗೆ ಇದ್ದು, ಭೌಗೋಳಿಕವಾಗಿ ಎತ್ತರದ ಪ್ರದೇಶವಾಗಿರುತ್ತದೆ.

ಉ) ಬ್ಯಾಡಗಿ ತಾಲ್ಲೂಕಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸುವ ಸಲುವಾಗಿ ಸರ್ಕಾರವು ಗುಡ್ಡದಮಲ್ಲಾಪುರ ಏತ ನೀರಾವರಿ ಯೋಜನೆಗೆ ಈಗಾಗಲೇ ಅನುಮೋದನೆಯನ್ನು ನೀಡಿದೆ. ಏತ ನೀರಾವರಿ ಯೋಜನೆಯ ಅನುಷ್ಠಾನದಿಂದ ಬ್ಯಾಡಗಿ ತಾಲ್ಲೂಕಿನ ಸುಮಾರು 13000 ಎಕರೆ ಪ್ರದೇಶಗಳು ನೀರಾವರಿಯ ಸೌಲಭ್ಯಕ್ಕೆ ಒಳಪಡುತ್ತದೆ.

ಊ) ಅನುಮೋದನೆಗೊಂಡಿರುವ ಗುಡ್ಡದಮಲ್ಲಾಪುರ ಏತ ನೀರಾವರಿ ಯೋಜನೆಯಡಿ ಸುಮಾರು 13000 ಎಕರೆ ಪ್ರದೇಶಗಳು ನೀರಾವರಿಯ ಸೌಲಭ್ಯಕ್ಕೆ ಒಳಪಡುತ್ತದೆ.

298(296) ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ರಸ್ತೆ ಸಾರಿಗೆ ವಿಭಾಗೀಯ ಸಂಸ್ಥೆಗಳು ಯಾವುವು ;

ಆ) ಸಾರಿಗೆ ಸಂಸ್ಥೆಗಳು ರಾಷ್ಟ್ರೀಯ ಹೆದ್ದಾರಿಗಳಲ್ಲಿರುವ ಯಾವ ಯಾವ ಹೈವೆ ಡೆವಲಪರ್ಸ್‌ಗಳಿಗೆ ಕೊಟ್ಟಿರುವ ಪ್ರವೇಶ ಶುಲ್ಕದ ಪ್ರಮಾಣ ಎಷ್ಟು ?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ.

ಆ) ಹೈವೇ ಡೆವಲಪರ್ಸ್‌ಗಳಿಗೆ ಪ್ರವೇಶ ಶುಲ್ಕವನ್ನು ಈ ಕೆಳಕಂಡಂತೆ ಪಾವತಿಸಲಾಗಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ :

(ರೂ.ಲಕ್ಷಗಳಲ್ಲಿ)

	ಕಂಪನಿ	2003-04	2004-05 ಡಿಸೆಂಬರ್ 04 ರವರೆಗೆ	ಒಟ್ಟು
1	ಮೆ : ಜೆಸ್ ಟೋಲ್ ಪ್ರೈವೇಟ್ ಲಿಮಿಟೆಡ್	18.07	100.66	118.73
2	ಮೆ : ನಂದಿ ಹೈವೇ ಡೆವಲಪರ್ಸ್, ರಾ.ಹೆ.–4, ಹುಬ್ಬಳ್ಳಿ–ಧಾರವಾಡ	14.62	12.16	26.78
	ಇತರೆ	**30.76**	**10.41**	**51.17**
	ಒಟ್ಟು	**73.45**	**123.23**	**196.68**

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ :

1	ನಂದಿ ಹೈವೇ ಡೆವಲಪರ್ಸ್	–	ರೂ. 17,54,190.00
2	ಜೆ.ಎ.ಎಸ್.ಟೋಲ್ ರೋಡ್ ಕಂಪನಿ	–	ರೂ. 47,35,970.00

3	ಐ.ಆರ್.ಬಿ.ಪ್ರೈ.ಲಿ., ಕಂಬಟಗಿ ಘಾಟ್	– ರೂ. 95,360.00
	ಒಟ್ಟು	– ರೂ. 65,85,520.00

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ :

	ಜೆಎಎಸ್ ಟೋಲ್, ತುಮಕೂರು	– ರೂ. 29,70,912.00

299(299) ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ(ಬ್ಯಾಡಗಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬಚಾವತ್ ಆಯೋಗದ ಪ್ರಕಾರ ಎ.ಬಿ.ಸಿ. ಯೋಜನೆಯ ಅನ್ವಯ ಯಾವ ಯಾವ ನೀರಾವರಿ ಯೋಜನೆಗಳಿಗೆ ಎಷ್ಟೆಷ್ಟು ಟಿ.ಎಂ.ಸಿ. ನೀರನ್ನು ನಿಗದಿ ಮಾಡಲಾಗಿದೆ ;

ಆ) 31.03.2004ಕ್ಕೆ ಅನ್ವಯವಾಗುವಂತೆ ಯಾವ ಯಾವ ಯೋಜನೆಗಳಿಗೆ ಎಷ್ಟೆಷ್ಟು ಟಿ.ಎಂ.ಸಿ. ನೀರನ್ನು ಬಳಸಲಾಗಿದೆ ;

ಇ) ಬಳಸಬೇಕಾದ ನೀರಿನ ಪ್ರಮಾಣದಲ್ಲಿ ಎಷ್ಟು ಟಿ.ಎಂ.ಸಿ. ಬಾಕಿ ಇದೆ (ವಿವರ ನೀಡುವುದು);

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಬಚಾವತ್ ಆಯೋಗದ ವರದಿಯನುಸಾರ ಸ್ಕೀಂ–'ಎ' ನಲ್ಲಿ ರಾಜ್ಯಕ್ಕೆ ಒಟ್ಟಾರೆ 734.00 ಟಿ.ಎಂ.ಸಿ. ನೀರು ಹಂಚಿಕೆಯಾಗಿರುತ್ತದೆ.

ಸ್ಕೀಂ 'ಬಿ' ಅಡಿಯಲ್ಲಿ ನೀರಿನ ಹಂಚಿಕೆಯು 2ನೇ ಕೃಷ್ಣಾ ಜಲ ವಿವಾದ ನ್ಯಾಯಧೀಕರಣದ ಮುಂದಿರುತ್ತದೆ.

ಸ್ಕೀಂ 'ಸಿ' ಪ್ರಸ್ತಾವನೆ ಇರುವುದಿಲ್ಲ.

ಆ) ಸ್ಕೀಂ–'ಎ' ಅಡಿಯಲ್ಲಿ ಹಂಚಿಕೆಯಾಗಿರುವ ನೀರನ್ನು ಬಳಸಿಕೊಳ್ಳಲು ಯೋಜನಾವಾರು ಕಾರ್ಯಯೋಜನೆಯಂತೆ ಅನುಷ್ಠಾನಗೊಳಿಸಲಾಗುತ್ತಿದೆ.

ಇ) ಮೇಲಿನ ಉತ್ತರದಂತೆ ಪ್ರಶ್ನೆ ಉದ್ಭವಿಸುವುದಿಲ್ಲ.

ಸ್ಕೀಂ–ಎ ಅಡಿಯಲ್ಲಿ ಯೋಜನೆಗಳ ಪಟ್ಟಿ

ಕ್ರಮ ಸಂಖ್ಯೆ	ಯೋಜನೆ ಹೆಸರು	ಪುನರ್ ವಿಮರ್ಶಿತ ಹಂಚಿಕೆ (ಟಿ.ಎಂ.ಸಿ.ಗಳಲ್ಲಿ)
1	ಘಟಪ್ರಭಾ – 1, 2 ಮತ್ತು 3ನೇ ಹಂತ	87.70
2	ಭದ್ರಾ	61.70
3	ಅಂಬ್ಲಿಗೋಳ	1.10
4	ಚಂದ್ರಂಪಳ್ಳಿ	1.90
5	ಧರ್ಮ	1.10
6	ಗಾಯತ್ರಿ	0.45